MYSORE LEGISLATIVE ASSEMBLY

THIRTY-SIXTH DAY

Thursday, 18th June 1964

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Staff provided by the Horticulture Department to each taluk in the State to educate people to grow more fruits and vegetables.

*Q.—173. Sri E. NARAYANA GOWDA (Bangarpet).—

Will the Government be pleased to state :—

(*a*) whether the Department of Horticulture has provided necessary staff, etc., to each taluk in the State to educate people to grow more fruits and vegetables ;

(*b*) if not, the reasons therefor ;

(*c*) the amount provided in the III Five Year Plan in this regard details as to the amount provided under different heads may be furnished ?

*A.—Sri G. NARAYANA GOWDA (Minister for Agriculture).—

(*a*) Yes. Staff provided to as many taluks as possible as shown in the Statement placed on the Table of the House. [Placed in the Mysore Legislature Library *vide* No. 2/L.A., dated 18th June 1964.]

(*b*) For want of Technically trained staff some of the Taluks have not been provided with staff.

(*c*) The scheme for development of fruit production is being operated in the State under III Five-Year Plan with a plan provision

(SRI G. NARAYANA GOWDA)

of 40 lakhs of rupees as detailed below apart from the provision of Rs. 13,00,000 for short term loan :—

	Rs.
Pay of Officers	84,600
Pay of Establishment	4,16,940
D. A. and T. A.	3,08,340
Contingencies	5,75,000
Non-recurring charges	86,000
	14,70,880
Loans—Long Term	25,30,000
	40,00,880

or 40 Lakhs.

Short term Rs 13 lakhs.

The Scheme for development of vegetables in the State has been sanctioned in G. O. No. AE) 31 AHT 60; dated 11th September 1963 with a plan provision of Rs. 2.25 lakhs during the III Five Year Plan as detailed below :—

	Rs.
Pay of Officers	13,500
Pay of Establishment	49,068
D. A. and T. A.	27,790
Contingencies	85,500
Plants and Seeds	38,000
Non-recurring	15,000
	2,28,858

or Rs. 2.25 lakhs.

ಶ್ರೀ ಜಿ. ನಾರಾಯಣ ಗೌಡ.—(೮) ಪ್ರಶ್ನೆಗೆ ಉತ್ತರವಾಗಿ ಸಿಬ್ಬಂದಿ ವರ್ಗದವರು ಸಾಕಷ್ಟು ದೊರೆಯದಿರುವ ಕಾರಣ, ಕೆಲವು ತಾಲ್ಲೂಕುಗಳಿಗೆ ಸಿಬ್ಬಂದಿವರ್ಗದವರನ್ನು ಒದಗಿಸಿರುವುದಿಲ್ಲ ವೆಂಬುದಾಗಿ ಅಪ್ಪಣೆ ಕೊಡಿಸಿದ್ದೀರಿ. ಆದ್ದರಿಂದ ಸಿಬ್ಬಂದಿಯನ್ನು ತರಪೇತು ಮಾಡುವುದಕ್ಕೋಸ್ಕರ ಸರ್ಕಾರದವರು ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ?

† ಶ್ರೀ ಜಿ. ನಾರಾಯಣ ಗೌಡ.—ಜೇರೆ ತಾಲ್ಲೂಕುಗಳಿಗೆ ಪ್ರತ್ಯೇಕವಾಗಿ ಇಲ್ಲವೇ ಇಲ್ಲ. ಬಂಗಾರಪೇಟೆ ತಾಲ್ಲೂಕಿನೊಳಗೆ ಒಂದು ವೇಳೆ ಸಿಬ್ಬಂದಿ ಇಲ್ಲದೇ ಇದ್ದರೆ ಕೋಲಾರದಿಂದ ಇನ್‌ಸ್ಪೆಕ್ಟರ್ ಹೋಗಿ ಅಲ್ಲಿ ಕೆಲಸಮಾಡುತ್ತಾರೆ. ಆದರೂ ಅಲ್ಲಿಯೂ ಸಿಬ್ಬಂದಿವರ್ಗದವರನ್ನು ತರಪೇತು ಮಾಡುವುದಕ್ಕೆ ತಕ್ಕ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ.

†Indicates that the remarks or speeches have not been revised by the member concerned

ಶ್ರೀ ಇ. ನಾರಾಯಣ ಗೌಡ.—ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗೆ ಕೇವಲ 40 ಲಕ್ಷ ರೂಪಾಯಿಗಳನ್ನು ಒದಗಿಸಿರುವುದರಿಂದ ನಿರೀಕ್ಷಿಸಿದಷ್ಟು ಪ್ರತಿಫಲವನ್ನು ಹಣ್ಣಿನ ಉತ್ಪನ್ನದ ಅಭಿವೃದ್ಧಿ ಇಲಾಖೆಯಿಂದ ಪಡೆಯುವುದಕ್ಕೆ ಆಗುತ್ತದೆಯೇ ?

ಶ್ರೀ ಜಿ. ನಾರಾಯಣ ಗೌಡ.—ಒಂದು ವೇಳೆ ಈ ಪೊಬಲಗು ಸಾಕಾಗದೆ ಹೋದರೆ ಹೆಚ್ಚಿಗೆ ಹಣ ಪಡೆಯಲು ನೋಡೋಣ.

Sri G. V. GOWDA.—Out of 40 lakhs, 15 lakhs is for establishment and other charges. The long term loan is 25 lakhs. How is this loan to be operated and who are eligible ? How many persons have been given these loans ?

ಶ್ರೀ ಜಿ. ನಾರಾಯಣ ಗೌಡ.—ಹೊಸದಾಗಿ ತೋಟಗಳನ್ನು ಯಾರು ಪ್ರಾರಂಭ ಮಾಡುತ್ತಾರೋ ಅಂತಹವರಿಗೆ ಎಕರೆಯೊಂದಕ್ಕೆ 300 ರೂಪಾಯಿಗಳ ಪ್ರಕಾರ ಹಣವನ್ನು ಸಾಲದ ರೂಪವಾಗಿ ಕೊಡಬೇಕೆಂದು ಯೋಚನೆ ಮಾಡಿದೆ.

Sri RAJA PID NAIK.—May I know why the technical staff have not been appointed in the remaining places ?

Sri G. NARAYANA GOWDA.—It will be done as early as possible.

ಶ್ರೀ ಕೆ. ಲಕ್ಕಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಂದು ಹೆಡ್ ಕ್ವಾರ್ಟರ್‌ನಲ್ಲೂ ಹಣ್ಣು ಹಾಗೂ ತರಕಾರಿ ಹೆಚ್ಚಾಗಿ ಬೆಳೆಯಲು ಸಾಕಷ್ಟು ಪ್ರಚಾರ ಸರಿಯಾಗಿ ನಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ನಾರಾಯಣ ಗೌಡ.—ಹಾಗೇನೂ ಇಲ್ಲ. ಸಾಕಷ್ಟು ಪ್ರಚಾರ ಕಾರ್ಯ ನಡೆಯುತ್ತಿದೆ.

ಶ್ರೀ ಸಿ. ಆರ್. ರಂಗೇಗೌಡ.—ಈಗ ಹಣ್ಣಿನ ಉತ್ಪಾದನೆಗೆ 40 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆಯೆಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಹಣ್ಣು ಕೆಡದ ಹಾಗೆ ನೋಡಿಕೊಳ್ಳಲು ಕೋಲ್ಡ್ ಸ್ಟೋರೇಜ್ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಜಿ. ನಾರಾಯಣ ಗೌಡ.—ಆ ವಿಚಾರವನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಚನ್ನಬೈರೇ ಗೌಡ.—ಎಕರೆಯೊಂದಕ್ಕೆ 300 ರೂಪಾಯಿಗಳು ಸಾಲುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ನಾರಾಯಣ ಗೌಡ.—ಒಂದು ಎಕರೆಗೆ 300 ರೂಪಾಯಿಗಳು ಸಾಕಾಗುತ್ತವೆಂದು ತೀರ್ಮಾನ ಮಾಡಿರುವುದಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮಂತ್ರಿಗಳು ಎಕರೆಗೆ 300 ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನವಾಗಿದೆಯೆಂದು ಹೇಳಿದರು. ಇದಕ್ಕೆಲ್ಲಾ ರೂಲ್ಸ್ ಫ್ರೇಮ್ ಆಗಿವೆಯೇ ?

ಶ್ರೀ ಜಿ. ನಾರಾಯಣ ಗೌಡ.—ಈ ಯೋಜನೆ ಮೊದಲು ಕೊಡಗಿನಲ್ಲಿ ಜಾರಿಯಲ್ಲಿತ್ತು. ಈಗ ಆ ಯೋಜನೆಯನ್ನು ರಾಜ್ಯದಾದ್ಯಂತ ಜಾರಿಯಲ್ಲಿ ತರುವುದಕ್ಕೋಸ್ಕರ ರೂಲ್ಸ್ ಫ್ರೇಮ್ ಮಾಡುತ್ತಿದ್ದೇವೆ.

ಶ್ರೀ ಇ. ನಾರಾಯಣ ಗೌಡ.—ಪ್ರತಿಯೊಂದು ಜಿಲ್ಲೆಯಲ್ಲಿಯೂ ಈ ಬೆಳೆಗೆ ಭೂಗುಣ ಸರಿಯಾಗಿದೆಯೇ ಎಂಬುದನ್ನು ಪರೀಕ್ಷಿಸಲು ಮಾಡುವುದಕ್ಕೆ ತೋಟಗಾರಿಕೆ ಇಲಾಖೆಯಲ್ಲಿ ಏನಾದರೂ ವ್ಯವಸ್ಥೆ ಇದೆಯೇ ?

ಶ್ರೀ ಜಿ. ನಾರಾಯಣ ಗೌಡ.—ತರಕಾರಿ ಬೆಳೆಯುವುದಕ್ಕೆ, ಭೂಗುಣ ಪರೀಕ್ಷೆ ಮಾಡುವುದಕ್ಕೆ, ಸಾಯಲ್ ಟೆಸ್ಟಿಂಗ್ ಲ್ಯಾಬೊರೇಟರಿ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಒಂದು ಎಕರೆ ಹಣ್ಣಿನ ತೋಟ ಮಾಡುವುದಕ್ಕೆ, ಎಷ್ಟು ದುಡ್ಡು ಖರ್ಚಾಗುತ್ತದೆ ? ಸರ್ಕಾರದವರು ಕೊಡತಕ್ಕ ಕೇವಲ 300 ರೂಪಾಯಿಗಳು ಸಾಕೇ ? ಅದರಿಂದ ಎಷ್ಟರಮಟ್ಟಿಗೆ ಅವರಿಗೆ ಸಹಾಯವಾಗುತ್ತದೆ ?

ಶ್ರೀ ಜಿ. ನಾರಾಯಣ ಗೌಡ.—ಆ ಹಣ ಸಾಕಾಗುತ್ತದೆಂದು ತೀರ್ಮಾನವಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ತೋಟಗಾರಿಕೆ ಇಲಾಖೆಯಲ್ಲಿ ಎಷ್ಟು ವರ್ಷಗಳವರೆಗೆ ಟ್ರೈನಿಂಗ್ ಕೊಡುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ವರ್ಷದಲ್ಲಿ 10 ತಿಂಗಳುಗಳ ಕಾಲ ಟ್ರೈನಿಂಗ್ ಕೊಡುತ್ತಾರೆ. ಪ್ರತಿಯೊಬ್ಬರಿಗೂ ಮಾಹೆಯಾನ 30 ರೂಪಾಯಿಗಳ ಸ್ಟೈಪಂಡ್ ಕೊಟ್ಟು ಶಿಕ್ಷಣ ಕೊಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ತೋಟಗಾರಿಕೆ ಮಾಡುವುದಕ್ಕೋಸ್ಕರ ಸಾಲವನ್ನು ಯಾವ ಏಜೆನ್ಸಿಯ ಮೂಲಕ ಕೊಡುತ್ತೀರಿ ?

ಶ್ರೀ ಜಿ. ನಾರಾಯಣ ಗೌಡ.—ಅದಕ್ಕೆ ಬಂಧನೆಗಳು ಈಗ ಆಗುತ್ತಿವೆ.

Sri SANJEEVANATH AIKALA.—Who advised the Government to separte the Department of Horticulture from the Department of Agriculture when there are no technical staff for horticulture ?

ಶ್ರೀ ಜಿ. ನಾರಾಯಣ ಗೌಡ.—ವ್ಯವಸಾಯ ಇಲಾಖೆಯಲ್ಲಿ ಹಾಗೂ ರೆವಿನ್ಯೂ ಇಲಾಖೆಯಲ್ಲಿ ಅನೇಕ ನಂದರ್ಭಗಳಲ್ಲಿ ಸಿಬ್ಬಂದಿ ಸಾಕಷ್ಟು ಇಲ್ಲದೆ ತೊಂದರೆಯಾಗಿರುವುದರಿಂದ ತೋಟಗಾರಿಕೆ ಇಲಾಖೆಯಿಂದ ಅನೇಕ ಅಧಿಕಾರಿಗಳನ್ನು ತೆಗೆದುಕೊಂಡು ಅಲ್ಲಿ ನೇಮಿಸಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಣ್ಣಿನ ಉತ್ಪಾದನೆಗೋಸ್ಕರ ಸರ್ಕಾರ ಕೊಡತಕ್ಕ ಹಣವನ್ನು ತೆಗೆದುಕೊಂಡು ಆ ಬಾಬಿನಲ್ಲಿ ಕಾರ್ಯೋನ್ಮುಖರಾಗದೇ ಇರುವುದರಿಂದಲೂ ಮತ್ತು ಸರ್ಕಾರ ಕೊಡತಕ್ಕ ಜಮೀನು ಬೇರೆ ಬೇರೆ ತರಹದಲ್ಲಿ ದುರ್ಬಿನಿಯೋಗವಾಗುತ್ತಿರುವುದರಿಂದ ಸರ್ಕಾರದವರು ಕೂಲೇ ಈ ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಜಾರಿಗೆ ತರುವುದಕ್ಕೆ ಇನ್ನೆಷ್ಟು ಕಾಲವನ್ನು ತೆಗೆದುಕೊಳ್ಳುತ್ತಾರೆ ?

ಶ್ರೀ ಜಿ. ನಾರಾಯಣ ಗೌಡ.—ಈಗ ಅದಕ್ಕೆ ಬೇಕಾದ ನಿಬಂಧನೆಗಳನ್ನು ಪ್ರೇಮ್ ಮಾಡುತ್ತಿದ್ದೇವೆ, ಅದಾದ ತಕ್ಷಣ ಈ ಯೋಜನೆಯನ್ನು ಜಾರಿಗೆ ತರುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಗುಂಡ್ಲುಪೇಟೆಗೆ ಒಬ್ಬ ಫೀಲ್ಡ್ ಅಸಿಸ್ಟೆಂಟನ್ನು ನೇಮಕ ಮಾಡಿದ್ದೀರಿ. ಈಗಾಗಲೇ 10 ಎಕರೆ ಜಮೀನನ್ನು ಅಲ್ಲಿ ತೆಗೆದುಕೊಂಡಿದ್ದೀರಿ. ಪುನಃ ಇನ್ನಷ್ಟು ಜಾಗ ಕೇಳುತ್ತಿದ್ದೀರಿ. ಇದುವರೆಗೆ ಅಲ್ಲಿಗೆ ಮೂರು ಕಾಸು ಹಣ ಕೊಡದೆ ನುಮ್ಮನೆ ಫೀಲ್ಡ್ ಅಸಿಸ್ಟೆಂಟನ್ನು ನೇಮಕ ಮಾಡಿದ್ದರಿಂದೇನು ಪ್ರಯೋಜನ ?

ಶ್ರೀ ಜಿ. ನಾರಾಯಣ ಗೌಡ.—ನಾನು ಮೊದಲೇ ಹೇಳಿದ ಹಾಗೆ: ಕೊಡಗು ಜಿಲ್ಲೆಯೊಳಗೆ ಮಾತ್ರ ಈ ನಿಬಂಧನೆ ಜಾರಿಯಲ್ಲಿದೆ. ಆ ನಿಬಂಧನೆಗಳನ್ನು ರಚಿಸಿ ರಾಜ್ಯದಾದ್ಯಂತ ಆದಷ್ಟು ಜಾಗ್ರತೆ ಜಾರಿಗೆ ತರಲಾಗುತ್ತದೆ.

Sri SANJEEVANATH AIKALA.—What is the progress achieved regarding horticulture gardens in the district of South Kanara ? A proposal for acquiring land for vegetable and fruit gardens is pending since the last 2 years.

Sri G. NARAYANA GOWDA.—No information is available.

Sri G. V. GOWDA.—Sir, would the Minister assure the House that the whole amount provided would be spent by the end of the Third Plan ?

Sri G. NARAYANA GOWDA.—As far as possible, I will see that it is spent.

Road works sanctioned by the Taluk Development Board, Hoskote, during 1961-62, 1962-63 & 1963-64

*Q.—234. Sri B. CHANNABYRE GOWDA (Hosakote).—

Will the Government be pleased to state :—

(*a*) the number of road works sanctioned by the Taluk Development Board, Hoskote during the years 1961-62, 1962-63 and 1963-64 (Hobli and villagewar information may be furnished) ;

(*b*) the number of works executed and the number yet to be executed ;

(*c*) the reasons for the delay ?

A.—Sri RAMAKRISHNA HEGDE (Minister for Development, Panchayat Raj & Co-operation).—

(*a*) 36. *Vide* Statement given below.

(*b*) 32 works have been executed and 4 are yet to be executed.